# ಎಕ್ಸ್‌ಪೋಸ್ ಮಾಡಲಾರೆ

ಬಾಲನಟಿಯಾಗಿ ಹತ್ತಾರು ಸಿನಿಮಾಗಳಲ್ಲಿ ಅಭಿನಯಿಸಿದ್ದ ಬಿಂದುಶ್ರೀ ಈಗ ಬಣ್ಣದ ಲೋಕದಲ್ಲಿ ಬದುಕು ಕಟ್ಟಿಕೊಳ್ಳಲು ತಿರುಗಿ ಬಂದಿದ್ದಾರೆ. ಸಾಕಷ್ಟು ಸಿನಿಮಾ ಮಾಡಿರುವ ನಟಿಯರಲ್ಲಿಯೂ ಅಪರೂಪವೆನಿಸುವ ಸ್ಪಷ್ಟತೆ ಅವರಲ್ಲಿನ ವಿಶೇಷ. ಈ ಗುಣವೇ ಅವರ ನಾಳೆಗಳನ್ನೂ ನಿರ್ಧರಿಸುವ ದಿಕ್ಸೂಚಿಯಾಗಬಹುದು.

■ ಪದ್ಮನಾಭ ಭಟ್



ಯುಕೆಜಿಯಿಂದಲೇ ಸಿನಿಮಾಗಳಲ್ಲಿ ನಟಿಸಿದ ಹುಡುಗಿ ಅವರು. 'ಶ್ರೀರಸ್ತು ಶುಭಮಸ್ತು' ಸಿನಿಮಾದಲ್ಲಿ ನಾಯಕಿ ಅನು ಪ್ರಭಾಕರ್ ಅವರ ಚಿಕ್ಕವಯಸ್ಸಿನ ಪಾತ್ರದಲ್ಲಿ ಕಾಣಿಸಿಕೊಂಡವರು. 'ಪ್ರೀತ್ಸು ತಪ್ಪೇನಿಲ್ಲ', 'ಶಿವಪ್ಪ ನಾಯಕ' ಸೇರಿದಂತೆ ಹತ್ತಾರು ಸಿನಿಮಾಗಳಲ್ಲಿ, 'ಕಾವ್ಯಾಂಜಲಿ'ಯಂಥ ಧಾರಾವಾಹಿಯಲ್ಲಿ ಬಾಲನಟಿಯಾಗಿ ತೆರೆಯ ಮೇಲೆ ಬೆಳಗಿದವರು. ಹಲವು ನಾಯಕಿಯರು ನಟಿಸಿದ ಪಾತ್ರದ ಬಾಲ್ಯಾವಸ್ಥೆಗೆ ತೆರೆಯ ಮೇಲೆ ಜೀವತುಂಬಿದ್ದ ಅವರಿಗೆ, ಮುಂದೊಂದು ದಿನ ತಾನೂ ಅವರಂತೆ ನಾಯಕಿಯಾಗುತ್ತೇನೆ; ತನ್ನ ಬಾಲ್ಯಾವಸ್ಥೆಗೆ ಇನ್ನೊಂದು ಬಾಲನಟಿ ಜೀವತುಂಬುತ್ತಾಳೆ ಎಂದು ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಆದರೆ ಬದುಕು ಕನಸಿಗೂ ಮೀರಿದ್ದೇ ಅಲ್ಲವೇ?

ಬಿಂದುಶ್ರೀ ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರಿನಲ್ಲಿಯೇ. ಸಿವಿಲ್ ಎಂಜಿನಿಯರಿಂಗ್ ಅನ್ನು ಚಿನ್ನದ ಪದಕದೊಟ್ಟಿಗೆ ಮುಗಿಸಿದ ಅವರ ಗಮನ ಮಾತ್ರ ಚಂದನವನದ ಪ್ರವೇಶದ್ವಾರದ ಕಡೆಗೇ ಇತ್ತು. ಆದರೆ ಬಣ್ಣದ ಮೋಹದ ಕುರಿತು ವಿರಾಗ ಮೂಡುವ ಘಟನೆಯೊಂದು ಬದುಕಿನಲ್ಲಿ ನಡೆಯಿತು. ಅದು ಅಮ್ಮನ ಸಾವು.

"ಬಾಲ್ಯದಲ್ಲಿ ನಟಿಸಿ ಗೊತ್ತಿದ್ದರಿಂದ ನನಗೆ ಸಿನಿಮಾ ಕಡೆಗೆ ಒಲವು ಯಾವಾಗಲೂ ಇತ್ತು. ಆದರೆ ಓದಿಗೆ ತೊಂದರೆ ಆಗಬಾರದು ಎಂದು ನಟಿಸಲು ಸಾಧ್ಯವಾಗಲಿಲ್ಲ. ನನ್ನ ಆಸೆಯನ್ನು ಅಪ್ಪನ ಬಳಿ ಹೇಳಿಕೊಂಡಾಗಲೆಲ್ಲ, 'ನೀನು ಚೆನ್ನಾಗಿ ಓದು. ನಂತರ ಏನು ಬೇಕಾದರೂ ಮಾಡು' ಎನ್ನುತ್ತಿದ್ದರು. ಅಮ್ಮನಿಗೆ ನಾನು ನಟಿಯಾಗುವುದು ಇಷ್ಟವಿತ್ತು. ಅವಳೇ ನನ್ನೊಳಗಿನ ಆಸೆಗೆ ನೀರೆರೆಯುತ್ತ ಬಂದಿದ್ದು. ಕಷ್ಟಪಟ್ಟು ಓದಿ, ಗೋಲ್ಡ್ ಮೆಡಲ್ ಜೊತೆ ಎಂಜಿನಿಯರಿಂಗ್ ಉತ್ತೀರ್ಣಳಾದೆ. ಇನ್ನೇನು ಸಿನಿಮಾರಂಗದಲ್ಲಿ ಅವಕಾಶಗಳಿಗಾಗಿ ಪ್ರಯತ್ನಿಸಬೇಕು ಎಂದುಕೊಳ್ಳುವಾಗಲೇ ನನ್ನಮ್ಮ ತೀರಿಕೊಂಡರು. ನಾನು ನಟಿಯಾಗಬೇಕು ಎಂದು ಕನಸು ಕಂಡವರು, ನನ್ನ ನಟನೆಗೆ ಸದಾ ಪ್ರೋತ್ಸಾಹ ಕೊಡುತ್ತಿದ್ದವರು ಅವರು. ಅವರೇ ಹೋದಮೇಲೆ ಇನ್ನೇಕೆ ನಟನೆ ಎಂದು ಆ ಕಡೆ ಯೋಚನೆ ಮಾಡುವುದನ್ನೇ ನಿಲ್ಲಿಸಿಬಿಟ್ಟೆ" ಎಂದು ವಿಷಾದದಿಂದಲೇ ಅಮ್ಮನನ್ನು ನೆನಪಿಸಿಕೊಳ್ಳುತ್ತಾರೆ ಬಿಂದು.

ಬಣ್ಣದ ಮೋಹ ಸುಲಭಕ್ಕೆ ಬಿಡುವ ಮಾಯೆಯಲ್ಲ. ಎಂಜಿನಿಯರಿಂಗ್ ಮುಗಿಸಿದ ಬಿಂದು ನಟನೆಯ ಕನಸಿಗೆ ಬೆನ್ನು ಮಾಡಿ ಎರಡು ವರ್ಷ ಕೆಲಸ ಮಾಡಿದರು. ಆಗಲೂ ಅವರಿಗೆ ಅವಕಾಶಗಳು ಬರುತ್ತಲೇ ಇದ್ದವು. ಕೊನೆಗೊಂದು ದಿನ, 'ಅಮ್ಮನಂತೂ ಇಲ್ಲ; ಅವರ ಕನಸನ್ನಾದರೂ ನನಸಾಗಿಸಬೇಕಲ್ಲವೇ?' ಎಂಬ ಆಲೋಚನೆ ಬಂತು. ನಂತರ ಬರುವ ಅವಕಾಶಗಳನ್ನು ಕೂಲಂಕಶವಾಗಿ ಪರಿಶೀಲಿಸತೊಡಗಿದರು. ಅಮ್ಮನ ಕನಸು ಮಗಳು ನಟಿಯಾಬೇಕು ಎಂದಷ್ಟೇ ಆಗಿರಲಿಲ್ಲ. ಒಳ್ಳೆಯ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು ಎಂಬುದೂ ಆಗಿತ್ತು. ಅಂಥ ಒಂದು ಅವಕಾಶ ಬಿಂದುಶ್ರೀಗೆ ಕಾಣಿಸಿದ್ದು 'ಲಡ್ಡು' ಸಿನಿಮಾದಲ್ಲಿ. ಹೊಸ ಹುಡುಗರ ಈ ಪ್ರಯತ್ನದಲ್ಲಿ ಅವರಿಗೆ ಹಳ್ಳಿಯ ಬಜಾರಿ ಹುಡುಗಿ ಪಾತ್ರ ಸಿಕ್ಕಿತು. ಚಿತ್ರತಂಡ ಇವರ ಫೋಟೊ ನೋಡಿಯೇ ಚಿತ್ರಕ್ಕೆ ನಾಯಕಿಯನ್ನಾಗಿ ಮಾಡಿತ್ತು.